MYSORE LEGISLATIVE ASSEMBLY

FORTY-FIRST DAY

Monday, 27th July 1953

The House met in the Legislative Assembly Hall, Old Public Offices, Bangalore, at One of the Clock.

MR. SPEAKER (Sri H. SIDDAIYA, B.A., LL.B.) in the Chair.

QUESTIONS AND ANSWERS.

Vanamahotsava celebrations.

Q.—102. Sri B. MADHAVACHAR (Bhadravati) :—

Will the Government be pleased to state :—

(*a*) the number of trees planted in connection with the Vanamahotsava celebrations since its inception ;

(*b*) the number of trees surviving ;

(*c*) the amount spent on the Vanamahotsava celebrations since its inception ?

A.—Sri T. CHANNIAH (Minister for Public Health and Local Self-Government) :—

No.

(*a*) 81,78,726.

(*b*) 39,57,953.

(*c*) Rs. 15,252-7-1.

ಶ್ರೀ ಬಿ. ಮಾಧವಾಚಾರ್.—ಈ ವನಮಹೋತ್ಸವ ಕಾರ್ಯ ಪ್ರಾರಂಭವಾಗಿ ಎಷ್ಟು ದಿವಸವಾಯ್ತು ?

ಶ್ರೀ ಟಿ. ಚನ್ನಯ್ಯ.—1949ರಲ್ಲಿ ಪ್ರಾರಂಭವಾಯಿತು.

ಶ್ರೀ ಬಿ ಮಾಧವಾಚಾರ್.—ಹಾಕಿರುವಂತಕ್ಕ ಮರಗಳ ರಕ್ಷಣೆಗೆ ಏನು ಏರ್ಪಾಡುಮಾಡಿದ್ದೀರಿ ಯಾರು ನೋಡಿಕೊಳ್ಳುವವರು ?

ಶ್ರೀ ಟಿ. ಚನ್ನಯ್ಯ.—ಸಾಧಾರಣವಾಗಿ ರೆವೆನ್ಯೂ ಮತ್ತು ಫಾರೆಸ್ಟ್ ಇಲಾಖೆಯವರು.

ಶ್ರೀ ಬಿ. ಮಾಧವಾಚಾರ್.—ವರ್ಷ ವರ್ಷವೂ ಪ್ರೋಗ್ರೆಸ್ ರಿಪೋರ್ಟ್ ಬರುತ್ತಿದೆಯೆ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಬಿ. ಮಾಧವಾಚಾರ್.—81,78,726 ಗಿಡಗಳನ್ನು ನೆಡಲಾಗಿದೆ ಎಂದು ತಿಳಿಸಿದೆ. ಇದರಲ್ಲಿ ರಸ್ತೆಗಳ ಪಕ್ಕದಲ್ಲಿ ನೆಟ್ಟಿರುವ ಮತ್ತು afforestation ಗಾಗಿ ನೆಟ್ಟಿರುವ ಮರಗಳೂ ಸೇರಿವೆಯೆ ?

ಶ್ರೀ ಟಿ. ಚನ್ನಯ್ಯ.—Afforestationಗಾಗಿ ನೆಟ್ಟಿರುವ ಮರಗಳೂ ಬೇರೆ ರೀತಿಯಲ್ಲಿ ನೆಟ್ಟಿರುವ ಮರಗಳೂ ಸೇರಿವೆ.

ಶ್ರೀ ಬಿ. ಮಾಧವಾಚಾರ್.—39,57,953 ಮರಗಳು ಬದುಕಿವೆಯೆಂದು ಅಪ್ಪಣೆಯಾಗಿದೆ. ಉಳಿದ ಮರಗಳು ನತ್ತು ಹೋಗುವುದಕ್ಕೆ ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಮುಖ್ಯ ಕಾರಣ ಕಾಲ ಕಾಲಕ್ಕೆ ಸರಿಯಾಗಿ ಮಳೆಯಾಗದೇ ಇರುವುದು.

ಶ್ರೀ ಬಿ. ಮಾಧವಾಚಾರ್.—ಇಂಟರ್‌ನ್ಯಾಷನಲ್ ಸ್ಟ್ಯಾಂಡರ್ಡ್ ಪ್ರಕಾರ ಎಷ್ಟೆಕರೆ ಫಾರೆಸ್ಟ್ ಇರಬೇಕೆಂದು ನಿಗದಿಯಾಗಿದೆಯೋ ಅಷ್ಟು ನಮ್ಮ ಸಂಸ್ಥಾನದಲ್ಲಿದೆಯೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಬಿ. ಮಾಧವಾಚಾರ್.—ಈ ಯೋಜನೆಯನ್ನು ಹೆಚ್ಚು ಫಲದಾಯಕವಾಗಿ ಮತ್ತು ಪರಿಣಾಮಕಾರಿಯಾಗಿ ನಡೆಸುವುದಕ್ಕೆ ಸಾಧ್ಯವೆ ?

ಶ್ರೀ ಟಿ. ಚನ್ನಯ್ಯ.—ಫಾರೆಸ್ಟ್ ಇಲಾಖೆಯವರು ಒಟ್ಟು ಹತ್ತು ಸಾವಿರ ಎಕರೆ ಜಮೀನಿನಲ್ಲಿ ಪ್ಲಾಂಟೇಷನ್ ಮಾಡಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದಾರೆ, ಅದರಂತೆ ಮಾಡುತ್ತಾರೆ.

ಶ್ರೀ ಪಿ. ಆರ್. ರಾಮಯ್ಯ.—1953-54ನೆಯ ಸಾಲಿಗೆ ವನಮಹೋತ್ಸವಕ್ಕಾಗಿ ಬಜೆಟ್ಟಿನಲ್ಲಿ ಎಷ್ಟು ಹಣವನ್ನೊದಗಿಸಿದ್ದೀರಿ ?

Sri T. CHANNIAH.—Sir, I do not think that any amount has been set apart for this purpose in the budget of 1953-54.

ಶ್ರೀ ಪಿ. ಆರ್. ರಾಮಯ್ಯ.—ಹಾಗಾದರೆ ವನಮಹೋತ್ಸವ ಕಾರ್ಯ ವರ್ಷ ವರ್ಷವೂ ನಡೆಯಬೇಕೆಂತರೋ ಆಥವಾ ನಡೆಯಬೇಕಾಗಿಲ್ಲವೆಂತರೋ ? ಸರ್ಕಾರದ ನೀತಿಯೇನು ?

ಶ್ರೀ ಟಿ. ಚನ್ನಯ್ಯ.—ಸಾಧ್ಯವಿದ್ದರೆ, ಅಗತ್ಯವಿದ್ದರೆ ಮಾಡಬೇಕೆಂದಿದೆ, ಪ್ರತಿ ವರ್ಷವೂ ಮಾಡಬೇಕೆಂದಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ವನಮಹೋತ್ಸವ ಎಂದು ಹೇಳಿದ ಮೇರೆ, ಇದು ಪ್ರತಿವರ್ಷವೂ ನಡೆಯಬೇಕೆಂಬ ಸೂಚನೆ ಆ ಪದದಲ್ಲಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಇಲಾಖೆಯವರು ಪ್ರತಿ ವರ್ಷವೂ ಗಿಡಗಳನ್ನು ನೆಡುವ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಆದರೆ ಪ್ರತಿ ವರ್ಷವೂ ಉತ್ಸವ ಮಾಡಬೇಕೆಂದಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಈ ಸಂಬಂಧವಾಗಿ ಇಂಡಿಯಾ ಸರ್ಕಾರದಿಂದ ಇದು ಸರಿಯಾಗಿ ವರ್ಷ ವರ್ಷವೂ ನಡೆಯಬೇಕೆಂದು ನಮ್ಮ ಸರ್ಕಾರಕ್ಕೆ ಸೂಚನೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಹಿಂದೆ ಸೂಚನೆ ಕೊಟ್ಟಿದ್ದರು; ಅದರ ಪ್ರಕಾರ ಸರ್ಕಾರದವರೂ ಕೂಡ ರವೆನ್ಯೂ ಇರಾಖೆ, ಫಾರೆಸ್ಟ್ ಇರಾಖೆ ಮತ್ತು ಇತರ ಇರಾಖೆಗಳಿಂದ ಈ ಕೆಲಸವನ್ನು ಪ್ರತಿ ವರ್ಷವೂ ಕೈಕೊಳ್ಳುತ್ತಿದ್ದರು. ಅನೇಕ ಗಿಡಗಳು ಬದುಕಿವೆ. ಇವುಗಳ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟಿದೆ.

ಶ್ರೀ ಪಿ. ಆರ್. ರಾಮಯ್ಯ.—ಪ್ರತಿವರ್ಷವೂ ನಡೆಯಬೇಕೆಂದು ಇಂಡಿಯಾ ಸರ್ಕಾರದವರು ಸೂಚನೆ ಕೊಟ್ಟರೆ ಅದರಂತೆ ನಡೆಸುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಉತ್ಸವ ಮಾಡಲೇಬೇಕೆಂಬ ಖಚಿತವಾದ ಅಭಿಪ್ರಾಯವಿಲ್ಲ. ಮುಖ್ಯವಾಗಿ ಗಿಡಗಳನ್ನು ಪ್ರತಿವರ್ಷವೂ ಬೆಳೆಸುವಂತೆ ಮಾಡಬೇಕೆಂದು ಹೇಳುವುದು ಸಹಜ. ಸಂಬಂಧಪಟ್ಟ ಅಧಿಕಾರಿಗಳು ಕಾರ್ಯಕ್ರಮ ತೆಗೆದುಕೊಂಡು ಪ್ರತಿ ವರ್ಷವೂ ನಡೆಸುತ್ತಿದ್ದಾರೆ. ಎಷ್ಟೋ ಗಿಡಗಳು ಬೆಳೆದು ಚೆನ್ನಾಗಿವೆ.

ಶ್ರೀ ಪಿ. ಆರ್. ರಾಮಯ್ಯ.—ದೇಶಾಭ್ಯುದಯ ಕಾರ್ಯಗಳಲ್ಲಿ ಮರಗಳನ್ನು ಬೆಳೆಸುವುದು, ತೋಪುಗಳನ್ನು ಬೆಳೆಸುವುದು, ಗಿಡಗಳನ್ನು ನೆಡುವುದು ಮುಖ್ಯ ಕಾರ್ಯವಲ್ಲವೆ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಡಿ. ದೇವರಾಜ ಅರಸ್.—ನೆಟ್ಟಿರುವ ಗಿಡಗಳಲ್ಲಿ ಅರ್ಧಕ್ಕಿಂತ ಹೆಚ್ಚು ಹಾಳಾಗಿರುವುದಕ್ಕೆ ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಕಾಲ ಕಾಲಕ್ಕೆ ಮಳೆ ಬಾರದಿರುವುದು ಮುಖ್ಯ ಕಾರಣ. ಸರಿಯಾಗಿ ನೋಡಿಕೊಳ್ಳದೇಯಿರುವುದೂ ಒಂದು ಕಾರಣ, ಈ ಕಾರಣಗಳಿಂದ ಕೆಲವು ಗಿಡಗಳು ನಷ್ಟವಾಗಿವೆ.

ಶ್ರೀ ಡಿ. ದೇವರಾಜ ಅರಸ್.—ನೆಟ್ಟ ಗಿಡಗಳನ್ನು ಪೋಷಣೆಮಾಡುವ ಕೆಲಸವನ್ನು ಯಾರಿಗೆ ನೇಮಿಸಿದ್ದೀರಿ ?

ಅಧ್ಯಕ್ಷರು.—ಆಗಲೇ ಹೇಳಿದರು.

ಶ್ರೀ ಎಸ್. ಕರಿಯಪ್ಪ.—ನೆಟ್ಟ ಗಿಡಗಳಲ್ಲಿ ಶೇಕಡ 10ರಷ್ಟು ಉಳಿದರೂ ಸಾಕೆಂಬುದು ನಿಪುಣರ ಅಭಿಪ್ರಾಯವಲ್ಲವೆ ?

ಅಧ್ಯಕ್ಷರು.—ನೂರಾರು ಶೇಕಡ 50ರಷ್ಟು ಉಳಿದಿವೆಯೆಂದು ಹೇಳಿದ್ದಾರೆ. Your question does not arise in view of this answer.

Licensing of Hotels in the State.

Q.—231. Sri T. HANUMAIAH (Hiriyur—Scheduled Castes).—

Will the Government be pleased to state :—

(*a*) the total number of hotel license-holders in the State (district-war) ;

(*b*) the minimum and maximum license fee for the hotels in the State ;

(*c*) which are the hotels that are auctioned in public in the State—the names of the hotels with the bid amounts for the last five years may be furnished ?

A.—Sri T. CHANNIAH (Minister for Public Health and Local Self-Government).—

(*a*)—

	Districts		*No.*
1	Kolar	..	356
2	Mandya	..	219
3	Shimoga	..	287
4	Tumkur	..	338
5	Chikmagalur	..	261
6	Chitaldrug	..	278
7	Bangalore	..	972
8	Hassan	..	255
9	Mysore	..	559
	Total	..	3,525

(*b*)—

	Minimum	*Maximum*
	Rs.	Rs.
Corporation of the City of Bangalore	10	200
Mysore City Municipality ..	25	500

	Districts	*Minimum*	*Maximum*
		Rs.	Rs.
1	Kolar ..	3	40
2	Mandya ..	5	100
3	Shimoga ..	5	20
4	Tumkur ..	5	50
5	Chikmagalur ..	3	100
6	Chitaldrug ..	5	200
7	Bangalore ..	5	50
8	Hassan ..	1-8-0	30
9	Mysore minimum not furnished ..		100

Statement appended (*vide* appendix)

(*c*) Nil.

Bus Terminus Hotel Building has been leased for the past 5 years as follows :—

Rs. 560 per mensem up to 3rd December 1950.

Rs. 901 per mensem from 3rd December 1950 to 1st January 1953.

Rs. 701 per mensem from 1st January 1953.